| | |
|---|---|
| ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
| ಸಿ.ಸಿ.ನಂ.**34/2022** | |
| | ಚಾಸಾ-**5** |
| | ಪ್ರಾಸಾ-**5** |
| ಸಾಕ್ಷಿದಾರರ ಹೆಸರು | ಮಹಾದೇವಯ್ಯ ಕಲ್ಮಠ |
| ತಂದೆಯ ಹೆಸರು | ಬಸಯ್ಯ |
| ವಯಸ್ಸು | **60** ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಹುನ್ನೂರು, ತಾ: ಜಮಖಂಡಿ |

ದಿನಾಂಕ **08.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ:- ಸ.ಸ.ಅ ರವರಿಂದ:-

1. ನನಗೆ ಚಾಸಾ-1, 6 ರಿಂದ 8 ರವರ ಪರಿಚಯವಿದೆ. ಚಾಸಾ-6 ರವರು ಮರಣ ಹೊಂದಿರುತ್ತಾರೆ. ನನಗೆ ಚಾಸಾ-4 ರವರ ಪರಿಚಯವಿಲ್ಲ. ನನಗೆ ಆರೋಪಿತರ ಪರಿಚಯವಿದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ.

**(**ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಸದರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಸ.ಸ.ಅ. ರವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**)**

ಪಾಟೀ ಸವಾಲು:- ಸ.ಸ.ಅ. ರವರಿಂದ:-

1. ದಿನಾಂಕ 17.07.2021 ರಂದು ರಾತ್ರಿ 10.30 ಗಂಟೆ ಸುಮಾರಿಗೆ ಚಾಸಾ-1 ಮತ್ತು 3 ರವರೊಂದಿಗೆ ಆರೋಪಿತರು ಜಗಳ ಮಾಡಿ, 1 ರಿಂದ 10ನೇ ಆರೋಪಿತರು ಗುಂಪು ಕಟ್ಟಿಕೊಂಡು ಚಾಸಾ-1 ರವರ ಮನೆಯಲ್ಲಿ ದೊಂಬಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಎಲ್ಲಾ ಆರೋಪಿತರು ಸೇರಿ ಚಾಸಾ-1 ರವರ ಮನೆಯ ಒಳಗೆ ಅತಿಕ್ರಮಣ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಆರೋಪಿತರು ಸೇರಿ ಚಾಸಾ-1, 3 ಮತ್ತು 4 ರವರಿಗೆ ತಮ್ಮ ಕೈಗಳಿಂದ ಹೊಡೆಬಡೆ ಮಾಡಿ ಮತ್ತು ಚಾಸಾ-4 ರವರಿಗೆ ಒದ್ದು ಗಾಯವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಆರೋಪಿತರು ಸೇರಿ ಚಾಸಾ-4 ರವರನ್ನು ಅಕ್ರಮವಾಗಿ ಲೈಟಿನ ಕಂಬಕ್ಕೆ ಕಟ್ಟಿ ಪ್ರತಿಬಂಧಿಸಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಆರೋಪಿತರು ಸೇರಿ ಚಾಸಾ-1 ಮತ್ತು 3 ರವರಿಗೆ ಅವಮಾನ ಮಾಡುವ ಉದ್ದೇಶದಿಂದ ಅವರನ್ನು ಎಳೆದಾಡಿ ಅಪರಾಧಿಕ ಬಲಪ್ರಯೋಗ ಮಾಡಿ ಅವಮಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1, 3 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ

ಸರಿಯಲ್ಲ. ಸದರಿ ಘಟನೆಯ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹಿತ, ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಸ.ಸ.ಅ. ರವರು ದಂಡ ಪ್ರಕ್ರಿಯಾ ಸಂಹಿತೆ ಕಲಂ.161(3) ರ ಅಡಿಯಲ್ಲಿ ಪಡೆಯಲಾದ ಹೇಳಿಕೆಯನ್ನು ಓದಿ ಹೇಳಿದ್ದು, ಸಾಕ್ಷಿಯು ಅದನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ-</u>

(ಆರೋಪಿತರ ಪರ ವಕೀಲರನ್ನು ಕೂಗಿಸಲಾಯಿತು, ಹಾಜರು ಇರುವುದಿಲ್ಲ. ಆದ್ದರಿಂದ ಸಾಕ್ಷಿಯ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.)

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR
Digitally signed by RAJASHEKHAR
Date: 2025.10.09 10:56:42 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.